## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 206/22**

ಡಿ.ಡಬ್ಲ್ಯು 1

ಆರೋಪಿಯ ಹೆಸರು - ಪರಮೇಶ್ವರ ನಾಯ್ಕ
ತಂದೆಯ ಹೆಸರು - ಮಾಸ್ತಿ ನಾಯ್ಕ
ವಯಸ್ಸು - 71 ವರ್ಷ
ಉದ್ಯೋಗ - ಕೃಷಿ
ವಾಸ್ತವ್ಯ - ಹೊಲನಗದ್ದೆ, ಕುಮಟಾ ತಾಲೂಕ

(ಇಂದು ದಿನಾಂಕಃ 06-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ:**

ರಾಜೇಶ ನಾಯ್ಕ ಯಾರು ಎಂದು ನನಗೆ ಗೊತ್ತಿಲ್ಲ. ಈ ಹಿಂದೆ ನಾನು ಒಂದೆರಡು ಸಾರಿ ಕೋರ್ಟಿಗೆ ಬಂದಾಗ ಅವರನ್ನು ನಾನು ನೋಡಿದ್ದನ್ನು ಬಿಟ್ಟರೆ ಅವರ ಪರಿಚಯ ನನಗೆ ಇಲ್ಲ. ಫಿರ್ಯಾದಿದಾರರ ಬಳಿ ನಾನು ಹಣವನ್ನು ಪಡೆದುಕೊಂಡಿಲ್ಲ ಮತ್ತು ಅವರ ಮುಖಾಂತರ ಯಾವುದೇ ವ್ಯವಹಾರ ಮಾಡಿಲ್ಲ. ನಾನು ಮೀನು ಸಾಕಾಣಿಕೆ ಮಾಡಿಲ್ಲ. ನಾನು ಫಿರ್ಯಾದಿದಾರರ ಬಳಿಯಿಂದ ಯಾವುದೇ ಆಹಾರವನ್ನು ಪಡೆದುಕೊಂಡಿಲ್ಲ. ಫಿರ್ಯಾದಿದಾರರು ನನ್ನ ಮೇಲೆ ಸುಳ್ಳು ಕೇಸನ್ನು ಹಾಕಿಸಿ ಖರ್ಚನ್ನು ಮಾಡಿಸಿದ್ದಾರೆ.

**ಪಾಟೀ ಸವಾಲುಃ ಫಿರ್ಯಾದಿದಾರರ ಪರ ಶ್ರೀ ಎಂ.ಎಲ್.ಎನ್.(ಎಚ್) ವಕೀಲರಿಂದಃ**

ನಾನು ಬಿ.ಎ. ಪದವೀಧರ. ಫಿರ್ಯಾದಿಯಲ್ಲಿ ಏನು ಬರೆದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಫಿರ್ಯಾದಿದಾರರನ್ನು ನಮ್ಮ ಪರ ವಕೀಲರು ಪಾಟೀ ಸವಾಲು ಮಾಡುವಾಗ ನಾನು ನ್ಯಾಯಾಲಯದಲ್ಲಿ ಇದ್ದಿರಬಹುದು. ನಮ್ಮ ವಕೀಲರಿಗೆ ಪಾಟೀ ಸವಾಲು ಮಾಡಲು ನಾನೇ ಮಾಹಿತಿ ಕೊಟ್ಟಿದ್ದೆ. ಫಿರ್ಯಾದಿದಾರರು ಯಾವೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನೆಗೊಳಿಸಿಕೊಂಡಿದ್ದಾರೆಂದು ನನಗೆ ಗೊತ್ತಿದೆ. ಫಿರ್ಯಾದಿ ಈ ಕೇಸನ್ನು ಹಾಕುವ ಮುಂಚೆ ನನಗೆ ನೋಟಿಸ್‌ನ್ನು ಕೊಟ್ಟಿದ್ದು ಅದು ಜಾರಿಯಾಗಿದೆ ಎಂದರೆ ಸರಿ. ನಿ.ಪಿ.4 ರ ಮೇಲೆ ನನ್ನ ಸಹಿ ಇದೆ ಎಂದರೆ ಸರಿ. ಫಿರ್ಯಾದಿ ಕೊಟ್ಟಂತಹ ನೋಟಿಸನ್ನು ನಾನು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ಸದರಿ ನೋಟಿಸ್‌ಗೆ ನಾನು ಪ್ರತ್ಯುತ್ತರವನ್ನು ಕೊಟ್ಟಿದ್ದೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಫಿರ್ಯಾದಿ ಕೊಟ್ಟ ನೋಟಿಸ್‌ನಲ್ಲಿ ಸತ್ಯಾಂಶ

ಇರುವುದರಿಂದ ನಾನು ಪ್ರತ್ಯುತ್ತರ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಿ.ಪಿ.1 ನನಗೆ ಸಂಬಂಧಪಟ್ಟ ಚೆಕ್ಕು ಅಲ್ಲ. ನಿ.ಪಿ.1 ರ ಮೇಲಿರುವ ಸಹಿ ನನ್ನದೇ ಎಂದರೆ ಸರಿಯಲ್ಲ. ನಿ.ಪಿ.1 ರ ಮೇಲಿರುವ ಸಹಿ ನನ್ನದು ಅಲ್ಲ ಎಂದು ಪುಷ್ಠೀಕರಿಸಲು ಅದನ್ನು ಬೆರಳಚ್ಚು ತಜ್ಞರಿಗೆ ಕಳುಹಿಸಲು ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿ.ಪಿ.2 ರ ಪ್ರಕಾರ ಬ್ಯಾಂಕಿನವರು ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಮತ್ತು ನನ್ನ ಸಹಿಯಲ್ಲಿ ವ್ಯತ್ಯಾಸ ಇದೆ ಎಂದು ಹಿಂಬರಹ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ಕೇಸನ್ನು ಹಾಕಿದ ನಂತರ ಈ ಕೇಸಿಗೆ ಸಂಬಂಧಪಟ್ಟಂತೆ ದಾಖಲಾತಿಗಳ ದೃಢೀಕೃತ ನಕಲುಗಳನ್ನು ನೀವು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನಾನು ನ್ಯಾಯಾಲಯದಿಂದ ದೃಢೀಕೃತ ನಕಲುಗಳನ್ನು ಪಡೆದುಕೊಂಡ ನಂತರ ಸಂಬಂಧಪಟ್ಟ ಬ್ಯಾಂಕಿಗೆ ಹೋಗಿ ನಿ.ಪಿ.1 ಮತ್ತು ನಿ.ಪಿ.2 ರ ಬಗ್ಗೆ ವಿಚಾರಿಸಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ನನ್ನ ಚೆಕ್ಕು ಅಲ್ಲದ್ದರಿಂದ ಹೋಗಿ ಕೇಳಿಲ್ಲ ಎಂದು ಹೇಳುತ್ತಾರೆ. ನನಗೆ ಸಂಬಂಧಪಟ್ಟಂತೆ ಬ್ಯಾಂಕ್ ಖಾತೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಇದೆ ಎಂದರೆ ಸರಿಯಲ್ಲ. ನಿ.ಪಿ.1 ನನಗೆ ಸಂಬಂಧಪಟ್ಟಂತಹ ಚೆಕ್ಕು ಇದ್ದು ಅದರ ಮೇಲಿರುವ ಸಹಿ ಕೂಡ ನನ್ನದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಕೇಸು 2013 ನೇ ಸಾಲಿನ ಕೇಸು ಎಂದರೆ ನನಗೆ ಗೊತ್ತಿಲ್ಲ. ಫಿರ್ಯಾದಿದಾರರು ಖಾಸಗಿ ಫಿರ್ಯಾದಿಯನ್ನು ದಾಖಲಿಸಿ ನಂತರ ಅದು ಸಿ.ಸಿ. ನಂ. 50/2016 ಎಂದು ದಾಖಲಾಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಫಿರ್ಯಾದಿದಾರರ ಸಾಕ್ಷಿ ಮುಗಿದ ನಂತರ ಕಲಂ 313 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ನನ್ನ ಹೇಳಿಕೆ ದಾಖಲಿಸುವ ಸಮಯದಲ್ಲಿ ಕೇಸು ಈ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಕೇಸು ಈ ನ್ಯಾಯಾಲಯಕ್ಕೆ ಬಂದ ನಂತರ ನನಗೂ ಮತ್ತು ಫಿರ್ಯಾದಿದಾರರಿಗೆ ನ್ಯಾಯಾಲಯದಿಂದ ಬಂದಿಲ್ಲ ಅನ್ನುವುದು ಸರಿಯಲ್ಲ. ನಾನು ನೋಟಿಸ್ ಬಂದ ನಂತರ ನನಗೆ ಆರೋಗ್ಯ ಸರಿ ಇಲ್ಲದ್ದರಿಂದ ನಾನು ನ್ಯಾಯಾಲಯದ ಮುಂದೆ ಹಾಜರು ಆಗಿಲ್ಲ. ನೋಟಿಸ್‌ನ್ನು ಕೊಡದೇ 2 ಮುದ್ದತ್ತುಗಳನ್ನು ಕೊಟ್ಟು ಫಿರ್ಯಾದಿ ಹಾಜರಾಗಿಲ್ಲ ಎಂದು 2 ನೇ ಮುದ್ದತ್ತಿಗೆ ಕೇಸು ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ.

ಕೇಸು ವಜಾಗೊಂಡ ನಂತರ ಫಿರ್ಯಾದಿದಾರರು ಕ್ರಿಮಿನಲ್ ರಿವಿಜನ್ ನಂ. 24/2022 ರಂತೆ ಕೇಸನ್ನು ಹಾಕಿದ್ದು, ಅದರಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿದ್ದೆ ಎಂದರೆ ಸರಿ. ಫಿರ್ಯಾದಿ ಸಲ್ಲಿಸಿದಂತಹ ಕ್ರಿಮಿನಲ್ ರಿವಿಜನ್ ಕೇಸ ಪುರಸ್ಕೃತಗೊಂಡು ಈ ನ್ಯಾಯಾಲಯಕ್ಕೆ ವಿಚಾರಣೆ ಮಾಡಲು ಆದೇಶ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

ನ್ಯಾಯಾಲಯದಿಂದ ಎಷ್ಟೋ ಬಾರಿ ಸಮನ್ಸ್ ಕಳುಹಿಸಿದ್ದು ನಾನು ಹಾಜರಾಗದೇ ಇದ್ದಾಗ ಜಿಲ್ಲಾ ವರಿಷ್ಠಾಧಿಕಾರಿಗಳ ಮುಖಾಂತರ ವಾರಂಟ್ ಕಳುಹಿಸಿದಾಗ ನೀವು ಹಾಜರಾಗಿದ್ದೀರಿ ಎಂದರೆ ಸಾಕ್ಷಿ ನನ್ನ ಆರೋಗ್ಯ ಸರಿ ಇಲ್ಲದ್ದರಿಂದ ನಾನು ಹಾಜರಾಗಿಲ್ಲ ಎಂದು ಹೇಳುತ್ತಾರೆ. ನಾನು ಕುಮಟಾ ತಾಲೂಕಿನ ಹೊಲನಗದ್ದೆ ಗ್ರಾಮದಲ್ಲಿ ನನ್ನ ವಾಸ್ತವ್ಯ ಎಂದರೆ ಸರಿ. ನನಗೆ ಗಜನಿ ಜಮೀನು ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ತೆಂಗು ಬೆಳೆಯುವ ಜಮೀನು ಇದೆ ಎಂದು ಹೇಳುತ್ತಾರೆ. ಹೊಲನಗದ್ದೆ ಗ್ರಾಮದಲ್ಲಿ ಗಜನಿ ಜಮೀನು ಜಾಸ್ತಿ ಎಂದರೆ ಸಾಕ್ಷಿ ಅಘನಾಶಿನಿಯಲ್ಲಿ ಮತ್ತು ಹೆಗಡೆ ಗ್ರಾಮದಲ್ಲಿ ಗಜನಿ ಜಮೀನು ಇದೆ ಎಂದು ಹೇಳುತ್ತಾರೆ. ಬಹಳಷ್ಟು ಜನರು ಗಜನಿ ಜಮೀನನ್ನು ಲೀಸ್‌ನಲ್ಲಿ ತೆಗೆದುಕೊಂಡು ಶೆಟ್ಲಿಗಳನ್ನು ಬೆಳೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶೆಟ್ಲಿಗಳನ್ನು ಬೆಳೆಸುವಾಗ ಅದಕ್ಕೆ ಆಹಾರವನ್ನು ಹಾಕಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಫಿರ್ಯಾದಿದಾರರು ಕುಮಟಾದಲ್ಲಿ ಶೆಟ್ಲಿಗಳಿಗೆ ಸಂಬಂಧಪಟ್ಟಂತಹ ಆಹಾರದ ಏಜೆನ್ಸಿ ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಫಿರ್ಯಾದಿದಾರರಿಂದ ಶೆಟ್ಲಿಗಳಿಗೆ ಬೇಕಾದಂತಹ ಆಹಾರವನ್ನು ಫಿರ್ಯಾದಿದಾರರಿಂದ ಉದ್ರಿ ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಆಹಾರವನ್ನು ತೆಗೆದುಕೊಂಡ ಸಂಬಂಧವಾಗಿ ನಾನು ಫಿರ್ಯಾದಿದಾರರಿಗೆ ರೂ. 35,000-00 ಗಳ ಚೆಕ್ಕನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಿ.ಪಿ.1 ರ ಚೆಕ್ಕು ನನಗೆ ಸಂಬಂಧಪಟ್ಟಿದ್ದು ನನ್ನ ಮತ್ತು ಫಿರ್ಯಾದಿದಾರರ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಅದನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಸಹ ಸದರಿ ಚೆಕ್ಕನ್ನು ಫಿರ್ಯಾದಿದಾರರಿಗೆ ಮೋಸ ಮಾಡಲು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ಹೆಚ್ಚಿನ ಶಿಕ್ಷೆಗೆ ಅರ್ಹನಾಗಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಫಿರ್ಯಾದಿ ತೀರಿಕೊಂಡು ಹೋಗಿದ್ದಾನೆ ಎಂದು ಹೇಳಿದರೆ ಈ ಕೇಸು ಮುಗಿಯುತ್ತದೆ ಎಂಬ ಉದ್ದೇಶದಿಂದ ನಾನು ನಮ್ಮ ವಕೀಲರಿಗೆ ಸುಳ್ಳು ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ರೀತಿಯ ಸುಳ್ಳು ಮಾಹಿತಿಗೆ ಸಹ ನಾನು ಶಿಕ್ಷೆಗೆ ಅರ್ಹನಾಗಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ